# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

## ವಿದ್ಯಾಸಂಗಮ, ಬೆಳಗಾವಿ-591156

## 70ನೇ ಸಾಮಾನ್ಯ ಸಿಂಡಿಕೇಟ್ ಸಭೆ ಹಾಗೂ 2021ನೇ ಸಾಲಿನ 4ನೇ ಸಭೆಯ ನಡುವಳಿಗಳು

ದಿನಾಂಕ : ಮಂಗಳವಾರ, 22-06-2021

ಸಮಯ : ಬೆಳಿಗ್ಗೆ 11:00 ಘಂಟೆ

ಸ್ಥಳ : ಸಿಂಡಿಕೇಟ್ ಸಭಾಂಗಣ, ರಾ.ಚ.ವಿ.ಬೆ
(Google Meet)

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **70ನೇ ಸಾಮಾನ್ಯ ಸಿಂಡಿಕೇಟ್** ಹಾಗೂ **2021ನೇ ಸಾಲಿನ 04ನೇ ಸಭೆಯನ್ನು** ಮಂಗಳವಾರ ದಿನಾಂಕ 22 ಜೂನ್ 2021 ರಂದು ಬೆಳಿಗ್ಗೆ 11.00 ಘಂಟೆಗೆ ಜರುಗಿದ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.

## I. ಸಭೆಗೆ ಹಾಜರಿದ್ದ ಸದಸ್ಯರು

| | | |
|---|---|---|
| 1. | **ಪ್ರೊ. ಎಂ. ರಾಮಚಂದ್ರಗೌಡ** | **ಕುಲಪತಿಗಳು ಹಾಗೂ ಅಧ್ಯಕ್ಷರು** |
| 2. | ಪ್ರೊ. ಹೆಚ್. ವಾಯ್. ಕಾಂಬ್ಳೆ | ಸದಸ್ಯರು |
| 3. | ಶ್ರೀ. ಶ್ರೀನಿವಾಸ ರಾ. ಶಾಸ್ತ್ರಿ | ಸದಸ್ಯರು |
| 4. | ಡಾ.(ಶ್ರೀಮತಿ) ನೀತಾ ಎಸ್. ರಾವ್ | ಸದಸ್ಯರು |
| 5. | ಡಾ. ಹುಸೇನಮೀಯ್ಯಾ ಡಿ.ಎಚ್. | ಸದಸ್ಯರು |
| 6. | ಡಾ. ಎಸ್.ಎಂ. ನದಾಫ್ | ಸದಸ್ಯರು |
| 7. | ಡಾ. ಎ.ಎಸ್. ಅಮೋಘಿಮಠ | ಸದಸ್ಯರು |
| 8. | ಡಾ.(ಶ್ರೀಮತಿ) ಮಹಾದೇವಿ ಬಿ. ತಲ್ಲೂರ | ಸದಸ್ಯರು |
| 9. | ಶ್ರೀ ಹನುಮಂತಪ್ಪ ಎಸ್. ಶಿಗ್ಗಾಂವ್ | ಸದಸ್ಯರು |
| 10. | ಡಾ. ಕೆ. ಶೇಷಮೂರ್ತಿ | ಸದಸ್ಯರು |
| 11. | ಕು. ಶೋಭಾ ಹೂಗಾರ್ | ಸದಸ್ಯರು |
| 12. | ಡಾ. ಆನಂದ್ ಹೊಸೂರ್ | ಸದಸ್ಯರು |
| 13. | ಶ್ರೀ ಅಶೋಕ ಕೆ. ಕಬ್ಬೇರ್ | ಸದಸ್ಯರು |
| 14. | ಶ್ರೀ ಕಿರಣಕುಮಾರ್ ಡಿ. ದೇಸಾಯಿ | ಸದಸ್ಯರು |
| 15. | **ಪ್ರೊ. ಎಸ್.ಎಂ. ಹುರಕಡ್ಲಿ** | **ಕುಲಸಚಿವರು(ಮೌ) ಹಾಗೂ ಸದಸ್ಯರು** |
| 16. | **ಪ್ರೊ. ಬಸವರಾಜ ಪದ್ಮಶಾಲಿ** | **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** |

## II. ಸಭೆಗೆ ಹಾಜರಿರದ ಸದಸ್ಯರು:

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 5. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

**ವಿದ್ಯಾಸಂಗಮ, ಬೆಂಗಳೂರು-ಪೂನಾ ರಾ.ಹೆ.-4, ಬೆಳಗಾವಿ-591156**

**ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು.**

ವಿಷಯ: ದಿನಾಂಕ 22 ಜೂನ್ 2021 ರಂದು ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ವಿಶ್ವವಿದ್ಯಾಲಯದ 70ನೇ ಹಾಗೂ 2021ನೇ ಸಾಲಿನ 4ನೇ ಸಾಮಾನ್ಯ ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು.

ಉಲ್ಲೇಖ: 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27)(28)(2).
2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 11-06-2021.
3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 11-06-2021.

ಪ್ರಸ್ತಾವನೆ:

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (28)(2)ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರದ 70ನೇ ಆನ್‌ಲೈನ್ ಸಭೆಯನ್ನು (Google Meet) ಆಯೋಜನೆ ಮಾಡಿ ಮಾನ್ಯ ಕುಲಸಚಿವರು ಸಭೆಯ ಅಧ್ಯಕ್ಷತೆ ವಹಿಸಿದ ಮಾನ್ಯ ಕುಲಪತಿಗಳಾದ ಪ್ರೊ. ಎಂ. ರಾಮಚಂದ್ರಗೌಡ ಇವರನ್ನು ಹಾಗೂ ಹಾಜರಿದ್ದ ಗೌರವಾನ್ವಿತ ಸದಸ್ಯರುಗಳನ್ನು ಸ್ವಾಗತಿಸಿದರು.

ಕೋವಿಡ್-19 2ನೇ ಅಲೆಯು ವ್ಯಾಪಕವಾಗಿ ಹರಡುತ್ತಿರುವ ಹಿನ್ನಲೆಯಲ್ಲಿ ಸರ್ಕಾರದ ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ನು ಪಾಲಿಸಬೇಕಿದೆ ಹಾಗೂ ಕುಲಪತಿಗಳ ನಿರ್ದೇಶನದಂತೆ ಆನ್‌ಲೈನ್ ಸಭೆಯನ್ನು ನಡೆಸುತ್ತಿರುವುದಾಗಿ ಸಭೆಗೆ ತಿಳಿಸಿದರು.

ದಿನಾಂಕ: 21-06-2021 ನಡೆದ ಸಚಿವ ಸಂಪುಟದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಕಟ್ಟಡಕ್ಕೆ ಸರ್ಕಾರದಿಂದ 110 ಕೋಟಿ ರೂ.ಗಳ ಆಡಳಿತಾತ್ಮಕ ಅನುಮೋದನೆ ದೊರೆತಿರುವುದನ್ನು ಎಲ್ಲರಿಗೂ ತಿಳಿಸಿ ಮಾನ್ಯ ಕುಲಪತಿಗಳಿಗೆ ಹಾಗೂ ಎಲ್ಲಾ ಸಿಂಡಿಕೇಟ್, ವಿದ್ಯಾವಿಷಯಕ್, ಬೋಧಕ, ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ವಿಶ್ವವಿದ್ಯಾಲಯದ ಪರವಾಗಿ ಅಭಿನಂದನೆಗಳನ್ನು ತಿಳಿಸಿದರು. ಈ ರೀತಿಯ ಅಭಿವೃದ್ಧಿ ಕಾರ್ಯಗಳಲ್ಲಿ ಎಲ್ಲರ ಸಹಕಾರವನ್ನು ಸ್ಮರಿಸುತ್ತಾ, ಕೋವಿಡ್-19 ನಂತಹ ಸಾಂಕ್ರಾಮಿಕ ರೋಗದಿಂದ ಅನೇಕ ಹಿನ್ನಡೆಗಳ ನಡುವೆ ಪ್ರೊ. ರಾಮಚಂದ್ರ ಗೌಡ, ಇವರ ಕಾರ್ಯವು ವಿಶ್ವವಿದ್ಯಾಲಯಕ್ಕೆ ಸುವರ್ಣಯುಗ ಎಂದು ಬಣ್ಣಿಸಿದರು.

ಮಾನ್ಯ ಕುಲಪತಿಗಳು ಸಭಗೆ ಎಲ್ಲರನ್ನು ಸ್ವಾಗತಿಸಿ, ಸರ್ಕಾರದಿಂದ 110 ಕೋಟಿ ರೂ.ಗಳ ಆಡಳಿತಾತ್ಮಕ ಅನುಮೋದನೆ ದೊರೆತಿರುವುದಕ್ಕೆ ಸಂತಸ ವ್ಯಕ್ತಪಡಿಸಿ ಈ ಯಶಸ್ಸಿಗೆ ಸ್ಪಂದಿಸಿದ ಎಲ್ಲರಿಗೂ ಧನ್ಯವಾದ ತಿಳಿಸಿ ಸನ್ಮಾನ್ಯ ಶ್ರೀ. ದಿವಂಗತ ಸುರೇಶ್ ಅಂಗಡಿ ಇವರು ವಿಶ್ವವಿದ್ಯಾಲಯಕ್ಕೆ ಸರ್ಕಾರಿ ಜಮೀನು ದೊರೆಯಲು ನೀಡಿದ್ದ ಸಹಕಾರ ಅಪಾರ ಮತ್ತು ಅವರು ನಮ್ಮ ಜೊತೆ ಇಲ್ಲವೆಂದು ವಿಷಾದ ವ್ಯಕ್ತಪಡಿಸಿದರು, ಹಾಗೂ ಈ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಸ್ಪಂದಿಸಿದ ಸನ್ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ. ಗೋವಿಂದ ಕಾರಜೋಳ ಹಾಗೂ ಸನ್ಮಾನ್ಯ ಶ್ರೀ ಆರ್. ಅಶೋಕ್, ಇವರು ಮತ್ತು ಶ್ರೀ. ರಮೇಶ ಜಾರಕಿಹೊಳಿ, ಶ್ರೀ. ಅರವಿಂದರಾವ್ ದೇಶಪಾಂಡೆ, ಶ್ರೀ. ರಾಘವೇಂದ್ರ ಕಾಗವಾಡ್, ಮತ್ತು ಶಾಸಕರು, ಸಂಸದರು, ಮತ್ತು ಅನೇಕ ಗಣ್ಯವ್ಯಕ್ತಿಗಳ ಸಹಕಾರಕ್ಕೆ ಧನ್ಯವಾದ ತಿಳಿಸಿದರು ಹಾಗೂ ಅಭಿವೃದ್ಧಿ ಕಾರ್ಯದಲ್ಲಿ ವಿಶ್ವವಿದ್ಯಾಲಯದಲ್ಲಿ ಸಹಕರಿಸಿದ ಎಲ್ಲಾ ಸಿಂಡಿಕೇಟ್, ವಿದ್ಯಾವಿಷಯಕ್, ಬೋಧಕ, ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ವಿಶ್ವವಿದ್ಯಾಲಯದ ಪರವಾಗಿ ಅಭಿನಂದನೆಗಳನ್ನು ತಿಳಿಸಿದರು.

ಮುಂದುವರೆದು, ಕುಲಸಚಿವರು ಮಾತನಾಡುತ್ತಾ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ರ ಕಲಂ 34 ರ ಪ್ರಕಾರ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ Faculty Concept ಜಾರಿಗೆ ತಂದಿರುವ ಹಿನ್ನೆಲೆಯಲ್ಲಿ 04 Faculty ಗಳಿಂದ 04 ಜನ ಡೀನ್‌ಗಳಲ್ಲಿ ಜೇಷ್ಠ ಸ್ಕೂಲ್ ಡೀನರಾದ **ಪ್ರೊ. ಹೆಚ್. ವಾಯ್. ಕಾಂಬ್ಳೆ**, ಇವರನ್ನು

ನೇಮಕ ಮಾಡಲಾಗಿದ್ದು, ಸದರಿಯವರನ್ನು ಸಭೆಗೆ ಸ್ವಾಗತಿಸಿದರು. ಮತ್ತು ಕಳೆದ ಸಿಂಡಿಕೇಟ್ ಸಭೆಯಲ್ಲಿ ಡೀನ್ ವಿಭಾಗದಿಂದ ಆಯ್ಕೆಯಾಗಿದ್ದ, ಪ್ರೊ. ಎಂ. ಸಿ. ಯರ್ರಿಸ್ವಾಮಿ, ಇವರ ಸೇವೆ ಹಾಗೂ ಸಹಕಾರಕ್ಕಾಗಿ ಅಭಿನಂದನೆಗಳನ್ನು ತಿಳಿಸಿದರು.

ತದನಂತರ, ಕುಲಸಚಿವರು ವಿಷಯ ಸೂಚಿಗಳನ್ನು ಪ್ರಸ್ತಾಪಿಸಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 70ನೇ ಸಾಮಾನ್ಯ ಸಿಂಡಿಕೇಟ್ ಹಾಗೂ 2021ನೇ ಸಾಲಿನ 04ನೇ ಸಿಂಡಿಕೇಟ್ ಸಭೆಯ ಕಾರ್ಯಸೂಚಿ ಅನುಗುಣವಾಗಿ ದಿನಾಂಕ 22-06-2021 ರಂದು ಕೈಗೊಂಡ ತೀರ್ಮಾನಗಳು.

| ಕ್ರ.ಸಂ | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 01 | 2021/06/01 | ಹಿಂದಿನ ಸಭೆಯ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಯನ್ನು ದೃಢೀಕರಣಕ್ಕಾಗಿ ಸಭೆಯ ಮುಂದಿಡುವುದು. |
| | ತೀರ್ಮಾನ | ದಿನಾಂಕ 23-03-2021 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆ ಹಾಗೂ ದಿನಾಂಕ: 07-04-2021 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಗಳ ಗೊತ್ತುವಳಿಗಳ ಅನುಪಾಲನಾ ವರದಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣಕ್ಕಾಗಿ ಮಾನ್ಯ ಕುಲಸಚಿವರು ಮಂಡಿಸಿದರು.<br>ಡಾ. ಆನಂದ್ ಹೊಸೂರ್, ಹಾಗೂ ಶ್ರೀ. ಅಶೋಕ ಕಬ್ಬೇರ್ ಇವರು ಪ್ರಸ್ತಾಪಿಸಿದಂತೆ ವಿಶ್ವವಿದ್ಯಾಲಯದಲ್ಲಿ ನಡೆಯುವ ಕಾರ್ಯಕ್ರಮಗಳು ಹಾಗೂ ಅಧಿಸೂಚನೆಗಳ ಪತ್ರಿಕಾ ಪ್ರಕಟಣೆಗಳು ಎಲ್ಲಾ ಪತ್ರಿಕೆಗಳ ಮುಖಾಂತರ ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ತಲುಪುವಂತೆ ನೋಡಿಕೊಳ್ಳುವಂತೆ ಸಲಹೆ ನೀಡಿದರು. ಹಾಗೂ ಶ್ರೀ. ಹನುಮಂತಪ್ಪ ಶಿಗ್ಗಾಂವ್, ಇವರು ಎಲ್ಲಾ ಪ್ರತಿಕೆಗಳಿಗೆ ಈ-ಮೇಲ್ ಕಳುಹಿಸುವಂತೆ ಸಲಹೆ ನೀಡಿದರು, ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದ ಘಟಿಕೋತ್ಸವದ ಹಾಗೂ ಟೆಂಡರ್‌ಗಳ ಕುರಿತಾದ ಪ್ರಕಟಣೆಗಳನ್ನು ಸರದಿ ಪ್ರಕಾರ ಎಲ್ಲ ಪತ್ರಿಕೆಗಳಿಗೆ ಜಾಹೀರಾತನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು ಮತ್ತು ಕುಲಸಚಿವರು ಈಗಾಗಲೇ ನಮ್ಮ ವಿಶ್ವವಿದ್ಯಾಲಯದ ಅಧಿಸೂಚನೆ/ಜಾಹಿರಾತುಗಳನ್ನು ವಾರ್ತಾ ಮತ್ತು ಪ್ರಚಾರ ಇಲಾಖೆಗೆ ನೀಡುತ್ತಿದ್ದೇವೆ ಹಾಗೂ ವಿಶ್ವವಿದ್ಯಾಲಯದಲ್ಲಿ ನಡೆಯುವ ಕಾರ್ಯಕ್ರಮಗಳ ಬಗ್ಗೆ ಎಲ್ಲಾ ಪತ್ರಿಕೆಗಳಿಗೆ ಈ—ಮೇಲ್ ಮೂಲಕ ವಿಷಯವನ್ನು ಪ್ರಕಟಣೆಗಾಗಿ ಕಳುಹಿಸಲಾಗುತ್ತಿದೆ ಎಂದು ತಿಳಿಸಿದರು.<br>ಕೇಂದ್ರ ಸರಕಾರವು, ಪ್ರವಾಸೋದ್ಯಮ ಇಲಾಖೆ ಮಂತ್ರಿಗಳಾದ ಸನ್ಮಾನ್ಯ ಪ್ರಲ್ಹಾದ ಸಿಂಗ್ ಪಟೇಲ್ ಇವರ ನೇತೃತ್ವದಲ್ಲಿ 75 ನೇ ಸ್ವಾತಂತ್ರ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲು ದೇಶದ ವಿವಿಧ ನಗರಗಳಲ್ಲಿ Azadi ka Amrut Mahotsav ಎಂಬ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಯೋಜನೆಯನ್ನು ರೂಪಿಸಿರುತ್ತದೆ. ಸದರಿ ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದಲ್ಲಿ ಯಶಸ್ವಿಗೊಳಿಸಲು ಮತ್ತು ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯ ಹಬ್ಬಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ರೂಪರೇಷಗಳಿಗೆ ಸಂಬಂಧಿಸಿದಂತೆ ಸಲಹಾ ಸಮಿತಿಯನ್ನು ರಚಿಸಬೇಕೆಂದು ಸದರಿ ಸಮಿತಿಗೆ ತಮ್ಮನ್ನು ಸದಸ್ಯರನ್ನಾಗಿ ಆಯ್ಕೆ ಮಾಡಬಹುದೆಂದು ಸದಸ್ಯರಾದ ಶ್ರೀ ಶ್ರೀನಿವಾಸ ಶಾಸ್ತ್ರಿ, ಇವರು ಇಂಗಿತ ವ್ಯಕ್ತಪಡಿಸಿದರು. ಅದರಂತೆ ಶ್ರೀ ಶ್ರೀನಿವಾಸ ಶಾಸ್ತ್ರಿ, ಕು.ಶೋಭಾ ಹೂಗಾರ ಇವರನ್ನು ಒಳಗೊಂಡಂತೆ ಇಬ್ಬರು ಸಿಂಡಿಕೇಟ್ ಸದಸ್ಯರು, ಇಬ್ಬರು ವಿದ್ಯಾ ವಿಷಯಕ್ ಪರಿಷತ್ ಸಮಿತಿ ಸದಸ್ಯರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಲಾಗುವುದು ಎಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. ಸಭೆಯು ಇದಕ್ಕೆ ಸಮ್ಮತಿ ಸೂಚಿಸಿತು.<br>ಸದಸ್ಯರಾದ ಶ್ರೀ ಹನುಮಂತಪ್ಪ ಶಿಗ್ಗಾಂವ್, ಇವರು ವಿಜಯಪುರ ಮತ್ತು ಜಮಖಂಡಿ ಸ್ನಾತಕೋತ್ತರ ಕೇಂದ್ರಗಳ ಅಭಿವೃದ್ಧಿಗಾಗಿ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಅಭಿವೃದ್ಧಿ ಸಮಿತಿಗಳನ್ನು ರಚಿಸಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು. ಮಾನ್ಯ ಕುಲಪತಿಗಳು ಅಭಿವೃದ್ಧಿ ಸಮಿತಿಗಳನ್ನು ರಚಿಸಲಾಗುವುದು ಸದರಿ ಸಮಿತಿಗಳಿಗೆ ಸ್ನಾತಕೋತ್ತರ ಕೇಂದ್ರಗಳ ನಿರ್ದೇಶಕರು/ಸಂಯೋಜಕರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ ಎಂದು ಸಭೆಗೆ ತಿಳಿಸಿದರು.<br>Annual Maintainence Contracts (AMC) ಜಾರಿಗೆ ತರಲು ಮೌಲ್ಯಮಾಪನ ಮಾಡಿದ ಅಂದಾಜು ಖರ್ಚು ವೆಚ್ಚದ ವರದಿಯನ್ನು ಸಿಂಡಿಕೇಟ್ ಸಭೆಯ ಗಮನಕ್ಕೆ ತಂದ |

| | | |
|---|---|---|
| | | ನಂತರ ಕ್ರಮಕೈಗೊಳ್ಳಲು ಸದಸ್ಯರಾದ ಡಾ. ಆನಂದ ಹೊಸೂರ್, ಇವರು ಪ್ರಸ್ತಾಪಿಸಿದರು. ಸಭೆಯು ಇದಕ್ಕೆ ಒಪ್ಪಿಗೆ ಸೂಚಿಸಿತು.<br>ಕಳೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಿದಂತೆ Vice-Chancellor Fund ನಲ್ಲಿ ಶೈಕ್ಷಣಿಕ ಅಂಕಗಳ ಪರಿಗಣಿಸುವುದರ ಜೊತೆಗೆ ಎನ್.ಎಸ್.ಎಸ್. ಹಾಗೂ ಎನ್.ಸಿ.ಸಿ. ಪಠ್ಯೇತರ ಚಟುವಟಿಕೆಗಳ ಸಾಧನೆಯನ್ನು ಕೂಡ ಪರಿಗಣಿಸುವಂತೆ ಶ್ರೀಮತಿ. ನೀತಾ ರಾವ್, ಸಲಹೆ ನೀಡಿದರು.<br>ಡಾ. ಆನಂದ್ ಹೊಸೂರ್, ಇವರು ಕಳೆದ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿದಂತೆ ಬಿ.ಸಿ.ಎ. ಕೋರ್ಸ್‌ನ Digital mode of Evaluation ಪ್ರಕ್ರಿಯೆ ಮೂಲಕ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ವಿಷಯ ಪ್ರಸ್ತಾಪಿಸಿದರು, ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು ಸದ್ಯ ಈ ಸಾಲಿಗೆ ಪ್ರಾಯೋಗಿಕವಾಗಿ ಬಿ.ಸಿ.ಎ ಕೋರ್ಸ್‌ನ Digital mode of Evaluation ಪ್ರಕ್ರಿಯೆ ಪ್ರಾರಂಭಿಸಲಾಗಿದೆ ಎಂದು ಸಭೆಗೆ ತಿಳಿಸಿದರು. ನಂತರ ಡಿಜಿಟಲ್ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ವಿಸ್ತೃತ ಚರ್ಚೆಯ ನಂತರ ಕುಲಪತಿಗಳು ವಿ.ಟಿ.ಯು ಕುಲಪತಿಗಳಾದ ಪ್ರೊ. ಕರಿಸಿದ್ದಪ್ಪ, ಇವರ ಜೊತೆಗೆ Modalities ಕುರಿತಾಗಿ ಚರ್ಚಿಸಿ ಸದರಿ ವಿಷಯವಾಗಿ ಹೆಚ್ಚಿನ ಮಾಹಿತಿ ಪಡೆಯುವುದಾಗಿ ತಿಳಿಸಿದರು. ಕುಲಸಚಿವರು(ಮೌ), ಇವರು ಮಾತನಾಡುತ್ತ ವಿ.ಟಿ.ಯು ಕುಲಪತಿಗಳಾದ ಪ್ರೊ. ಕರಿಸಿದ್ದಪ್ಪ, ಇವರ ಜೊತೆ ಮತ್ತು ಕೆಎಲ್‌ಇ ಗೆ ಭೇಟಿ ನೀಡಿ ಈ ಕುರಿತು ಮಾಹಿತಿ ಪಡೆದುಕೊಂಡು ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು.<br>ದಿನಾಂಕ **23-03-2021** ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆ ಹಾಗೂ ದಿನಾಂಕ: **07-04-2021** ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಗಳ ಗೊತ್ತುವಳಿಗಳ ಅನುಪಾಲನಾ ವರದಿಯನ್ನು ಸಭೆಯು ದೃಢೀಕರಿಸಿತು. |
| 02 | 2021/06/02 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಪ್ರೊ. ದಶರಥ ಆರ್. ಅಲಬಾಳ್, ಇವರನ್ನು ನಿವೃತ್ತಿಗೊಳಿಸಿರುವುದಕ್ಕೆ ಅನುಸಮರ್ಥನೆ ನೀಡುವ ಕುರಿತು. |
| | ತೀರ್ಮಾನ | **ಪ್ರೊ. ದಶರಥ ಆರ್. ಅಲಬಾಳ್, ಸಮಾಜಶಾಸ್ತ್ರ ವಿಭಾಗ, ಇವರನ್ನು ದಿನಾಂಕ: 31-05-2021 ರಂದು ವಯೋನಿವೃತ್ತಿಗೊಳಿಸಿರುವುದಕ್ಕೆ ಸಭೆಯು ಅನುಸಮರ್ಥನೆ ನೀಡಿತು.** |
| 03 | 2021/06/03 | ಪ್ರೊ. ಸಿದ್ದಪ್ಪ ಓ. ಹಲಸಗಿ, ಇವರು ಮರಣ ಹೊಂದಿರುವುದರಿಂದ ಇವರ ಕುಟುಂಬದವರಿಗೆ ಪಿಂಚಣಿ ಹಾಗೂ ಪಿಂಚಣಿ ಸೌಲಭ್ಯಗಳನ್ನು ಮಂಜೂರು ಮಾಡುವ ಕುರಿತು. |
| | ತೀರ್ಮಾನ | **ಪ್ರೊ. ಸಿದ್ದಪ್ಪ ಓ. ಹಲಸಗಿ, ಇವರು ಮರಣ ಹೊಂದಿರುವುದರಿಂದ ಇವರ ಕುಟುಂಬದವರಿಗೆ ವಿಶ್ವವಿದ್ಯಾಲಯ ನೀಡಬೇಕಾದ ಸೌಲಭ್ಯಗಳನ್ನು ನೀಡಲು ಸೂಚಿಸಿ ಪಿಂಚಣಿ ಹಾಗೂ ಪಿಂಚಣಿ ಸೌಲಭ್ಯಗಳನ್ನು ಮಂಜೂರು ಮಾಡಲು ಸಭೆಯು ಅನುಮೋದನೆ ನೀಡಿತು.** |
| 04 | 2021/06/04 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಡಾ. ಯೋಗಿತಾ ಪೋತದಾರ್, ಇವರ ವೇತನ ಹೆಚ್ಚಳಕ್ಕಾಗಿ ವಿನಂತಿಸಿರುವ ಕುರಿತು. |
| | ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಡಾ. ಯೋಗಿತಾ ಪೋತದಾರ್, ಇವರು ಕರ್ನಾಟಕ ಸರ್ಕಾರದ ನಡವಳಿಗಳನ್ವಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯರಿಗೆ ರೂ. 45,000/-ಕ್ಕೆ ಹೆಚ್ಚಿಸಿರುವಂತೆ ಹೆಚ್ಚಿಸಲು ವಿನಂತಿಸಿರುವುದನ್ನು ಸಭೆಗೆ ತಿಳಿಸಿದರು. ಶ್ರೀ ಅಶೋಕ ಕಬ್ಬೇರ್, ಇವರು ವೇತನ ಪರಿಷ್ಕರಣೆ ಸಮಿತಿ ಮುಂದೆ ನೀಡುವಂತೆ ಸೂಚಿಸಿದರು. ಕುಲಪತಿಗಳು ಮಾತನಾಡುತ್ತ ಡಾ. ಯೋಗಿತಾ ಪೋತದಾರ್, ಇವರು ಕಳೆದ 07 ವರ್ಷದಿಂದ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕೋವಿಡ್-19 ನಂತಹ ವಿಷಮ ಸಂದರ್ಭದಲ್ಲಿ ಒಳ್ಳೆಯ ಕಾರ್ಯ ನಿರ್ವಹಿಸಿದ್ದಾರೆ ಹಾಗೂ ಸರ್ಕಾರದ ನಡಾವಳಿಯಂತೆ ವೇತನ ನೀಡಲು ಸಭೆಯ ಅಭಿಪ್ರಾಯ ಕೇಳಿದರು. ಶ್ರೀ. ಶೇಷಮೂರ್ತಿ, ಇವರು ಕುಲಸಚಿವರು ಮತ್ತು ಕುಲಪತಿಗಳು ಸದರಿಯವರ ಕೆಲಸದ ಬಗ್ಗೆ ತಿಳಿಸಿದ್ದಾರೆಂದರೆ ವೇತನ ಹೆಚ್ಚಿಸಬಹುದು ಎಂದು ತಿಳಿಸಿದರು. ಚರ್ಚೆಯ ನಂತರ ಸದಸ್ಯರ ಅಭಿಪ್ರಾಯದಂತೆ ಸದರಿ ವಿಷಯವನ್ನು ವಿಶ್ವವಿದ್ಯಾಲದಲ್ಲಿರುವ ವೇತನ ಪರಿಷ್ಕರಣ ಸಮಿತಿಗೆ ಸಲ್ಲಿಸಿ ವರದಿ ತರಸಿಕೊಂಡ ನಂತರ ಕ್ರಮಕೈಕೊಳ್ಳಲು ಸೂಚಿಸಿತು.** |

| | | |
|---|---|---|
| 05 | 2021/06/05 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ, ಗಣಕವಿಜ್ಞಾನ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಪ್ರೊ. ಸಿದ್ದು ಪಿ. ಆಲಗೂರ್, ಇವರನ್ನು ವಯೋನಿವೃತ್ತಿಗೊಳಿಸುವುದಕ್ಕೆ ಹಾಗೂ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡುವ ಕುರಿತು. |
| | ತೀರ್ಮಾನ | ಪ್ರೊ. ಸಿದ್ದು ಪಿ. ಆಲಗೂರ್, ಗಣಕವಿಜ್ಞಾನ ವಿಭಾಗದ ಇವರನ್ನು ದಿನಾಂಕ: 31-07-2021 ರಂದು ವಯೋನಿವೃತ್ತಿಗೊಳಿಸುವುದಕ್ಕೆ ಹಾಗೂ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡಲು ಸಭೆಯು ಅನುಮೋದನೆ ನೀಡಿತು. |
| 06 | 2021/06/06 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ, ಆಡಳಿತ ಮತ್ತು ವ್ಯವಹಾರ ನಿರ್ವಹಣಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ, ಇವರನ್ನು ವಯೋನಿವೃತ್ತಿಗೊಳಿಸಿರುವುದಕ್ಕೆ ಅನುಸಮರ್ಥನೆ ಹಾಗೂ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡುವ ಕುರಿತು. |
| | ತೀರ್ಮಾನ | ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ, ಆಡಳಿತ ಮತ್ತು ವ್ಯವಹಾರ ನಿರ್ವಹಣಾ ವಿಭಾಗ, ಇವರನ್ನು ದಿನಾಂಕ: 30-04-2021 ವಯೋನಿವೃತ್ತಿಗೊಳಿಸಿರುವುದಕ್ಕೆ ಅನುಸಮರ್ಥನೆ ಹಾಗೂ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡಲು ಸಭೆಯು ಅನುಮೋದನೆ ನೀಡಿತು. |
| 07 | 2021/06/07 | ಸ್ಥಳೀಯ ತನಿಖಾ ಸಮಿತಿಗಳ ರಚನೆ ಮತ್ತು ಅನುಮೋದನೆ. |
| | ತೀರ್ಮಾನ | ಸ್ಥಳೀಯ ತನಿಖಾ ಸಮಿತಿಗಳನ್ನು ರಚಿಸಿ ಸಭೆಯು ಅನುಮೋದನೆ ನೀಡಿತು. |
| 08 | 2021/06/08 | ವಸತಿ ನಿಲಯಗಳಲ್ಲಿ ಬೋರವೆಲ್ ಕೊರೆಸುವ ಕುರಿತು. |
| | ತೀರ್ಮಾನ | ವಿಶ್ವವಿದ್ಯಾಲಯಕ್ಕೆ ನೀರು ಪೂರೈಕೆ ಬೋರವೆಲ್ ರಾಷ್ಟ್ರೀಯ ಹೆದ್ದಾರಿ ಹತ್ತಿರ ಇರುವುದರಿಂದ ಪದೇ ಪದೇ ಪೈಪಲೈನ್‌ಗಳು ಒಡೆದುಹೋಗುತ್ತಿವೆ ಹಾಗೂ ವಿದ್ಯಾರ್ಥಿ ವಸತಿನಿಯಲಯಕ್ಕೆ ನೀರು ಪೂರೈಕೆಯಾಗಬೇಕಾದರೆ ವಿಶ್ವವಿದ್ಯಾಲಯದಲ್ಲಿರುವ ನೀರಿನ ಟ್ಯಾಂಕ್ ಪೂರ್ತಿಯಾಗಿ ಭರ್ತಿಯಾಗಿರಲೇಬೇಕು ಆದ್ದರಿಂದ ಪ್ರತಿ ತಿಂಗಳ ವಿದ್ಯುತ್ ಬಿಲ್ ಕೂಡ ಅನಗತ್ಯ ಹೆಚ್ಚಾಗುತ್ತಿದೆ ಆದ್ದರಿಂದ ವಿಶ್ವವಿದ್ಯಾಲಯದ ವಸತಿ ನಿಲಯದ ಪಕ್ಕದಲ್ಲಿ ಒಂದು ಹೊಸ ಬೋರವೆಲ್ ಕೊರೆಸಿ ಎರಡೂ ವಸತಿ ನಿಲಯಗಳಿಗೆ ಸಂಪರ್ಕ ಕೊಡಬಹುದಾಗಿದೆ ಎಂದು ಕುಲಸಚಿವರು ಸಭೆಗೆ ತಿಳಿಸಿದರು. ಇದಕ್ಕೆ ತಗುಲಬಹುದಾದ ವೆಚ್ಚದ ಮಾಹಿತಿಯನ್ನು Works Committee ಯ ಗಮನಕ್ಕೆ ತಂದು ನಂತರ ಕ್ರಮ ಕೈಕೊಳ್ಳಲು ಸಭೆಯು ಸೂಚಿಸಿತು. |
| 09 | 2021/06/09 | ವಿಶ್ವವಿದ್ಯಾಲಯವು ದತ್ತು ಸ್ವೀಕರಿಸಿದ ಸರ್ಕಾರಿ ಶಾಲೆಗಳಿಗೆ ವಿಶ್ವವಿದ್ಯಾಲಯದಲ್ಲಿರುವ ಪಿಠೋಪಕರಣಗಳನ್ನು ದುರಸ್ಥಿ ಮಾಡಿಕೊಡುವ ಕುರಿತು. |
| | ತೀರ್ಮಾನ | ಸರ್ಕಾರದ ನಿರ್ದೇಶನದಂತೆ 10 ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡಿದ್ದು, ಬಿ.ಓ.ಇ ಸಮಿತಿ ಸರ್ಕಾರಿ ಶಾಲೆಗಳನ್ನು ಭೇಟಿ ನೀಡಿ ವರದಿಯನ್ನು ಸಲ್ಲಿಸಿರುತ್ತಾರೆ. ವರದಿಯಲ್ಲಿ ತಿಳಿಸಿರುವಂತೆ ಅನೇಕ ರೀತಿಯ ಸೌಲಭ್ಯ ಮಂಜೂರು ಮಾಡಬೇಕಿರುತ್ತದೆ ಆದರೆ ಸದ್ಯದ ಪರಿಸ್ಥಿತಿಯಲ್ಲಿ ವಿಶ್ವವಿದ್ಯಾಲಯವು ಸರ್ಕಾರಿ ಶಾಲೆಗಳ ಮೂಲಭೂತ ಸೌಕರ್ಯಗಳಿಗೆ ಹಣ ವಿನಿಯೋಗ ಮಾಡಲು ಆಗುವುದಿಲ್ಲ ಆದರೆ ನಮ್ಮ ವಿಶ್ವವಿದ್ಯಾಲಯದಲ್ಲಿರುವ ಹಳೆಯ ಕಂಪ್ಯೂಟರ್‌ಗಳು, ಹಳೆಯ ಖುರ್ಚಿಗಳನ್ನು/ ಬೆಂಚುಗಳನ್ನು ದುರಸ್ಥಿ ಮಾಡಿಸಿ ದತ್ತು ಸ್ವೀಕರಿಸಿದ ಸರ್ಕಾರಿ ಶಾಲೆಗಳಿಗೆ ನೀಡಲು ಸಭೆಯು ಅನುಮೋದನೆ ನೀಡಿತು. ಸದರಿ ವಿಷಯವಾಗಿ ಸರ್ಕಾರಿ ಶಾಲೆಗಳ ಮಾಹಿತಿ ನೀಡಲು ಸಿಂಡಿಕೇಟ್ ಸದಸ್ಯರು ಕುಲಸಚಿವರಿಗೆ ಮನವಿ ಮಾಡಿದರು ಕುಲಸಚಿವರು ಮಾಹಿತಿಯನ್ನು ಈ-ಮೇಲ್ ಮುಖಾಂತರ ಪೂರೈಸುವುದಾಗಿ ಸಭೆಗೆ ತಿಳಿಸಿದರು. |

| | | |
|---|---|---|
| 10 | 2021/06/10 | ಸಿಂಡಿಕೇಟ್ ಸದಸ್ಯರುಗಳು ಮಂಡಿಸಿರುವ ಪ್ರಸ್ತಾವನೆಗಳು:- |
| | | ಶ್ರೀಮತಿ. ನೀತಾ ರಾವ್. ಇವರು ಪ್ರಸ್ತಾಪಿಸಿರುವ ವಿಷಯಗಳು:-<br>1. ಭಗವದ್ಗೀತಾ ಅಧ್ಯಯನ ಪೀಠ ಪ್ರಾರಂಭಿಸುವ ಬಗ್ಗೆ- ಮಾನ್ಯ ಕುಲಪತಿಗಳು, ಅಧ್ಯಯನ ಪೀಠ ಆರಂಭದ ಕುರಿತು ಸರ್ಕಾರದ ಮಟ್ಟದಲ್ಲಿ ಅನುಮೋದನೆ ಮತ್ತು ಅನುದಾನವನ್ನು ಪಡೆದರೆ ವಿಶ್ವವಿದ್ಯಾಲಯದಲ್ಲಿ ಮುಂಬರುವ ದಿನಗಳಲ್ಲಿ ಸದರಿ ಪೀಠವನ್ನು ಆರಂಭಿಸುವುದಾಗಿ ಸಭೆಗೆ ತಿಳಿಸಿದರು.<br>2. ಎನ್.ಎಸ್.ಎಸ್. ಮತ್ತು ಎನ್. ಸಿ. ಸಿ. ಗಳನ್ನು ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಆಯ್ಕೆ ವಿಷಯಗಳಾಗಿ ಪರಿಗಣಿಸುವ ಕುರಿತು.- ಎನ್.ಎಸ್.ಎಸ್. ಮತ್ತು ಎನ್.ಸಿ.ಸಿ. ಗಳನ್ನು ಸ್ನಾತಕ ಮತ್ತು ಸ್ನಾತಕೋತ್ತರ ಹಲವಾರು ಕೋರ್ಸ್‌ಗಳಲ್ಲಿ ಆಯ್ಕೆ ವಿಷಯಗಳಾಗಿ ಅವಕಾಶ ನೀಡಲಾಗಿದೆ ಆದರೆ ವಿದ್ಯಾರ್ಥಿಗಳು ಮುಖ್ಯ ಐಚ್ಛಿಕ ವಿಷಯಗಳಿಗೆ ಮಾತ್ರ ಪ್ರಾಧಾನ್ಯತೆ ನೀಡುತ್ತಿದ್ದಾರೆ ಎಂದು ತಿಳಿಸಿದರು.<br>3. ಹತ್ತಿರದ ಹಳ್ಳಿಗಳಲ್ಲಿ ಅವಶ್ಯವಿರುವ ಜನಗಳಿಗೆ Food kit ವಿತರಿಸುವ ಬಗ್ಗೆ.- ವಿಶ್ವವಿದ್ಯಾಲಯದ ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಪೀಠದ ವತಿಯಿಂದ ವಿಶ್ವವಿದ್ಯಾಲಯಕ್ಕೆ ಹತ್ತಿರದ ಹಳ್ಳಿಗಳಲ್ಲಿ Food kit ವಿತರಿಸಲಾಗಿದೆ ಮತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಸಂಘ ಸಂಸ್ಥೆಗಳು ಹಳ್ಳಿಗಳಿಗೆ ಸಹಾಯ ಮಾಡುತ್ತಿದ್ದು, ಅವಶ್ಯವಿದ್ದಲ್ಲಿ Food kit ವಿತರಿಸುವ ಕಾರ್ಯ ಕೈಗೊಳ್ಳಲಾಗುವುದು ಎಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. |
| | | **ಅಧ್ಯಕ್ಷರ ಅಪ್ಪಣೆ ಮೇರೆಗೆ** |
| 1 | 2021/06/1 | ವಿಶ್ವವಿದ್ಯಾಲಯವು ನ್ಯಾಕ್ (NAAC) ಮಾನ್ಯತೆ ಸಲ್ಲಿಸಿದ ವರದಿಯು ಪೂರ್ವ ಅರ್ಹತೆ ಪಡೆದಿರುವುದಕ್ಕೆ Accreditation fee ಭರಿಸಲು ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | ಮಾನ್ಯ ಕುಲಪತಿಗಳು ಮಾತನಾಡುತ್ತ ವಿಶ್ವವಿದ್ಯಾಲಯವು ನ್ಯಾಕ್ ಮಾನ್ಯತೆ ಸಲ್ಲಿಸಿದ ವರದಿಯು ಪೂರ್ವ ಅರ್ಹತೆ ಪಡೆದಿದ್ದಕ್ಕೆ ಹರ್ಷವ್ಯಕ್ತಪಡಿಸಿ ಐ.ಕ್ಯೂ.ಎ.ಸಿ ನಿರ್ದೇಶಕರಾದ ಪ್ರೊ. ಶಿವಾನಂದ ಗೋರನಾಳೆಯವರನ್ನು ಹಾಗೂ ಪ್ರೊ. ಆರ್. ಎನ್. ಮನಗೂಳಿ ಹಾಗೂ ಅವರ ತಂಡಕ್ಕೆ ಅಭಿನಂದಿಸಿದರು. ಹಾಗೆಯೇ ನ್ಯಾಕ್ ಶೇಕಡಾ 70% ರಿಂದ 80% ರನ್ನು ಪೂರ್ವ ಅರ್ಹತೆಯಲ್ಲಿ ಪರಿಗಣಿಸಿದ್ದು ಆದಷ್ಟು ಬೇಗನೆ ಅಂತಿಮ ಭೇಟಿ ನೀಡಲಿದ್ದಾರೆ ಎಂದು ತಿಳಿಸಿದರು. ಆದ್ದರಿಂದ ಈಗ Accreditation fee Rs. 4,42,500/- (including GST @18%) and Logistics advance of amount Rs. 3,54,000/- Total Rs. 7,96,500/- ರೂಪಾಯಿಗಳನ್ನು ನ್ಯಾಕ್‌ಗೆ ಭರಿಸಬೇಕಾಗಿದೆ ಎಂದು ತಿಳಿಸಿದರು. ಸದರಿ ಮೊತ್ತವನ್ನು ನ್ಯಾಕ್‌ಗೆ ಪಾವತಿಸಲು ಸಭೆಯು ಅನುಮೋದನೆ ನೀಡಿತು. ಅಗಸ್ಟ್ ಅಥವಾ ಸೆಪ್ಟಂಬರ್ ಮಾಹೆಯಲ್ಲಿ ನ್ಯಾಕ್ ಸಮಿತಿಯು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಲಿದೆ ಎಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. |

ಕೊನೆಯದಾಗಿ ಕುಲಸಚಿವರು(ಮೌ) ಇವರು ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಿದರು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು                ಕುಲಪತಿಗಳು ಹಾಗೂ ಅಧ್ಯಕ್ಷರು

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಗೌರವಾನ್ವಿತ ಸಿಂಡಿಕೇಟ್ ಸದಸ್ಯರುಗಳಿಗೆ,

ಪ್ರತಿ ಮಾಹಿತಿಗಾಗಿ : ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.